**ಒ ಎಸ್ ನಂ. 95/2024**
**ಪಿ ಡಬ್ಲ್ಯೂ: 01**

**ದಿಃ 07-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಎಸ್ ಯು ವಕೀಲರಿಂದಃ**

ನಿಪಿ-1 ರಲ್ಲಿ ಒಟ್ಟು ಎಷ್ಟು ಕ್ಷೇತ್ರದ ಬಗ್ಗೆ ವ್ಯವಹಾರ ಆಗಿದೆ ಎಂದು ನಮೂದಿಸಿಲ್ಲ. ಅವುಗಳನ್ನು ಪ್ರತ್ಯೇಕವಾಗಿ ನಮೂದಿಸಲಾಗಿದೆ. ದಿನಾಂಕ 01.08.2021 ರಂದು ಸಾಕ್ಷಿದಾರರ ಸಮಕ್ಷಮ ಹಣ ನೀಡಿದ ಬಗ್ಗೆ ನಿಪಿ-1 ರಲ್ಲಿ ಕೆಳಗೆ ಹೆಸರು ನಮೂದಿಸಲಾಗಿದೆ. ನಿಪಿ-1 ರಲ್ಲಿರುವ 5 ಕಂಡಿಷನಗಳಲ್ಲಿ ಎಲ್ಲಿಯೂ ಕೂಡಾ ಎರಡು ಜನ ಸಾಕ್ಷಿದಾರರ ಸಮಕ್ಷಮ ಹಣ ನೀಡಿದ ಬಗ್ಗೆ ನಮೂದಿಸಿಲ್ಲ ಆದರೆ ಕೆಳಗೆ ಹೆಸರು ಬರೆಯಲಾಗಿದೆ. ದಿನಾಂಕ 01.08.2021 ರಂದು ಪ್ರತಿವಾದಿಯರಿಗೆ ರೂ 18 ಲಕ್ಷ ಹಣ ಕೊಟ್ಟಿಲ್ಲ ಆದ್ದರಿಂದ ಈ ಬಗ್ಗೆ ನಿಪಿ-1 ರಲ್ಲಿ ನಮೂದಿಸಿಲ್ಲ ಅಂದರೆ ಸರಿಯಲ್ಲ.

ನನ್ನ ಅಡ್ಡ ಹೆಸರು ಕಂಬಾರ ಮತ್ತು ಕಮ್ಮಾರ. ನನ್ನ ಶಾಲೆ ದಾಖಲೆಗಳಲ್ಲಿ ಕಂಬಾರ ಮತ್ತು ಕಮ್ಮಾರ ಎಂಬ ಎರಡು ಅಡ್ಡ ಹೆಸರುಗಳು ಇರುತ್ತವೆ. ನನ್ನ ವಾದ ಪತ್ರದಲ್ಲಿ, ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಅಡ್ಡ ಹೆಸರು ಕಂಬಾರ ಮತ್ತು ಕಮ್ಮಾರ ಎಂದು ಎಲ್ಲಿಯೂ ತಿಳಿಸಿಲ್ಲ. ಆಧಾರ ಕಾರ್ಡನಲ್ಲಿ ಈಗ ಕಮ್ಮಾರ ಎನ್ನುವದು ತಿದ್ದುಪಡಿ ಆಗಿ ಕಂಬಾರ ಎಂದು ನಮೂದಿಸಿರುವುದರಿಂದ ನಿಪಿ-1 ರಲ್ಲಿ ಕಂಬಾರ ಎಂದು ನಮೂದಿಸಲಾಗಿದೆ. ನನ್ನ ಅಡ್ಡ ಹೆಸರು ಕಮ್ಮಾರ ಇದು ಕಂಬಾರ ಎಂದು ಬದಲಾದ ಬಗ್ಗೆ ಬೇರೆ ದಾಖಲೆ ಇರುವುದಿಲ್ಲ. ನಿಪಿ-1 ರಲ್ಲಿ ನನ್ನ ಹೆಸರು ರುದ್ರಪ್ಪ ಬಸಪ್ಪ ಕಂಬಾರ ಎನ್ನುವದು ಬಾಂಡ ಪತ್ರದ ವಿವರಣೆಯಲ್ಲಿ ಇರುತ್ತದೆ. ಆದರೆ ದಾಖಲೆಯಲ್ಲಿ ಕಮ್ಮಾರ ಎಂದು ಅವರು ಬರೆಸಿರುತ್ತಾರೆ. ಎರಡು ಅಡ್ಡ ಹೆಸರುಗಳು ನನಗೆ ಸಂಬಂಧಿಸಿದ್ದಲ್ಲ ಅಂದರೆ ಸರಿಯಲ್ಲ. ದಾವೆ ಸಲ್ಲಿಸುವಾಗ ನಿಪಿ-1 ರಲ್ಲಿ ಕಂಬಾರ ಮತ್ತು ಕಮ್ಮಾರ ಎಂದು ನಮೂದಿಸಿರುವ ಬಗ್ಗೆ ನನಗೆ ಗೊತ್ತಿರಲಿಲ್ಲ. ಆದ್ದರಿಂದ ಕಂಬಾರ ಎಂದು ಬರೆಸಿರುತ್ತೇನೆ. ನಿಪಿ-1 ರಲ್ಲಿ ಬರೆಸಿರುವ ರುದ್ರಪ್ಪ ಬಸಪ್ಪ ಕಮ್ಮಾರ ನಾನು ಅಲ್ಲ ಅಂದರೆ ಸರಿಯಲ್ಲ, ನಾನು ಖೊಟ್ಟಿ ದಾಖಲೆಗಳನ್ನು ಹಾಜರ ಪಡಿಸಿ ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ನನ್ನ ಹೆಸರಿನ ಖಾತೆ ಶ್ರೀ ಭೀರೇಶ್ವರ ಕೋ ಆಫ್ ಸೊಸೈಟಿ ಕಲಘಟಗಿ ಶಾಖೆಯಲ್ಲಿ ಇರುತ್ತದೆ ಅಂದರೆ ಸರಿಯಲ್ಲ. ನಮ್ಮ ಊರಲ್ಲಿ ನನಗೆ ಸೇರಿದ ಹೊಲ ಇರುತ್ತದೆ. ಅದನ್ನು ಚಿಕ್ಕಮಠ ಎನ್ನುವರಿಗೆ ವತ್ತಿಗೆ ಹಾಕಿರುತ್ತೇನೆ. ರೂ 10 ಲಕ್ಷ ರೂಗಳಿಗೆ ವತ್ತೆ ಹಾಕಿರುತ್ತೇನೆ. ನನಗೆ ರೂ 7 ಲಕ್ಷ ಸಾಲ ಇದ್ದು ಅದನ್ನು ತೀರಿಸುವ ಸಲುವಾಗಿ ರೂ 10 ಲಕ್ಷಗಳಿಗೆ ವತ್ತೆ ಹಾಕಿದ್ದೆ ಅಂದರೆ ಸರಿಯಲ್ಲ. ನಾನು ಸಾಲ ತೀರಿಸುವ ಸಲುವಾಗಿ ಜಮೀನು ವತ್ತೆ ಹಾಕಿದ್ದರೂ ಕೂಡಾ ನನಗೆ ಸಾಲ ಇದೆ ಎಂದು ಗೊತ್ತಾಗುತ್ತದೆ ಎಂದು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಿಪಿ-1 ರ ದಿನಾಂಕದ ನಂತರ ಪ್ರತಿವಾದಿಯರು ದಾವಾ ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡಲು ತೆಗೆದಿರುವುದಿಲ್ಲ. ಶಿವಪುರ ಹೊಲ ಮಾರಾಟ ಮಾಡಲು ತೆಗೆದಿದ್ದರು. ಶಿವಪುರ ಹೊಲ ಮಾರಾಟಕ್ಕೆ ಇಟ್ಟ ಬಗ್ಗೆ ಪ್ರತಿವಾದಿಯರ ಮಗ ನನಗೆ ಕರೆ ಮಾಡಿ ತಿಳಿಸಿದ್ದಾರೆ. ಆದರೆ ಯಾವುದೆ ದಾಖಲೆ ಇರುವುದಿಲ್ಲ. ಪ್ರತಿವಾದಿಯರಿಗೆ ನಾನು ನೋಟೀಸ ಕೊಟ್ಟ ನಂತರ ಗಳಗಿಹುಲಕೊಪ್ಪ ಗ್ರಾಮದಲ್ಲಿ ಚಿಕ್ಕಣ್ಣನವರ ಮನೆತನದವರು ಮಾತುಕತೆ ಮಾಡಿದ್ದರು ಅಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ತಂದೆ ಮೃತಪಟ್ಟ ನಂತರ ಮರಣ ಪರಮಾಣ ಪತ್ರ ಬರೆದುಕೊಡುವ ಸಲುವಾಗಿ ನನ್ನ ಮೇಲೆ ವಿಶ್ವಾಸ ಇಟ್ಟುಕೊಟ್ಟಿದ್ದ ಬಾಂಡ ಪೇಪರನ್ನು ನಾನು ದುರಪಯೋಗ ಪಡಿಸಿಕೊಂಡು ಖೊಟ್ಟಿ ದಾಖಲೆ ಸೃಷ್ಟಿಸಿದ ಬಗ್ಗೆ ದೂರು ನೀಡುತ್ತೇವೆ ಎಂದು ತಿಳಿಸಿದ್ದರು ಅಂದರೆ ಸರಿಯಲ್ಲ, ನಾನು ಹಾಗೂ ನನ್ನ ಅಣ್ಣ ಸುರೇಶ ಇಬ್ಬರು ಇದ್ದೆವು ಅಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಹಾಗೂ ನನ್ನ ಅಣ್ಣ ಹಿರಿಯರ ಸುವಕ್ಷಮ ಸದರಿ ದಾಖಲೆ ಮೇಲೆ ನಾವು ಮುಂದುವರೆಯುವುದಿಲ್ಲ ಎಂದು ಭರವಸೆ ಕೊಟ್ಟಿದ್ದೇವು ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರಿಗೆ ಭರವಸೆ ಕೊಟ್ಟ ನಂತರ ಕೂಡಾ ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ.

ನಮ್ಮ ಅಣ್ಣ ಸುರೇಶ ಈತನು ಶಿವಲಿಂಗಪ್ಪ ಚಿಕ್ಕಣ್ಣವರ ಜೀವಂತ ಇದ್ದಾಗ ಅವರ ಜೀಪ ಚಾಲಕನಾಗಿ ಕೆಲಸ ಮಾಡುತ್ತಿದ್ದ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅದು ಸುಳ್ಳು ಎನ್ನುತ್ತಾರೆ. ಶಿವಲಿಂಗಪ್ಪ ಮರಣ ಹೊಂದಿದ ನಂತರ ನಮ್ಮ ಅಣ್ಣ ಸುರೇಶ ಈತನು ಚಿಕ್ಕಣ್ಣವರ ಇವರ ಪೆಟ್ರೋಲ್ ಪಂಪನಲ್ಲಿ ಕೆಲಸ ಮಾಡುತ್ತಿದ್ದ ಅಂದರೆ ಸರಿಯಲ್ಲ. ನಮ್ಮ ಅಣ್ಣ ಕೆಲಸ ಮಾಡುವ ಸಮಯದಲ್ಲಿ ನಾನು ಕೂಡಾ ಪೆಟ್ರೋಲ್ ಪಂಪಗೆ ಮೇಲಿಂದ ಮೇಲೆ ಹೋಗುತ್ತಿದ್ದೆ ಅಂದರೆ ಸಾಕ್ಷಿ ಶಿವಲಿಂಗಪ್ಪ ಇವರು ಪರಿಚಯ ಇದ್ದ ಕಾರಣ ಹೋಗಿ ಬಂದು ಮಾಡುತ್ತಿದ್ದೆ ಎನ್ನುತ್ತಾರೆ. ನಮ್ಮ ಅಣ್ಣ ಲೆಕ್ಕ ಪತ್ರ ಮಾಡುವಾಗ ಹಣ ದುರುಪಯೋಗ ಮಾಡಿರುವುದು ಕಂಡುಬಂದಿರುತ್ತದೆ ಅಂದರೆ ಸರಿಯಲ್ಲ. ನಮ್ಮ ಅಣ್ಣ ಚಿಕ್ಕಣ್ಣನವರ ಕುಟುಂಬದವರಿಗೆ ಹೆಚ್ಚಿನ ಮೊತ್ತದ ಹಣ ಮರಳಿಸಬೇಕಾಗುತ್ತದೆ ಎಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ನಮ್ಮ ಕೇಸಿಗೂ ಅದಕ್ಕೂ ಸಂಬಂಧ ಇಲ್ಲ ಅನ್ನುತ್ತಾರೆ. ನಮ್ಮ ಅಣ್ಣ ಹಣ ಮರಳಿಸಬೇಕಾಗುವುದನ್ನು ತಪ್ಪಿಸುವ ಸಲುವಾಗಿ ಪ್ರತಿವಾದಿಯರಿಗೆ ಬ್ಲ್ಯಾಕಮೇಲ ಮಾಡಲು ಈ ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಚಿಕ್ಕಣ್ಣನವರ ಕುಟುಂಬ ದೊಡ್ಡ ಮನೆತನ ಸದರಿಯವರಿಗೆ ಅವರ ಜಮೀನಿನ ಮೇಲೆ ಬ್ಯಾಂಕನವರು ಸಾಲ ನೀಡುತ್ತಾರೆ ಅಂದರೆ ಸಾಕ್ಷಿ ಈಗಾಗಲೆ ಬೋಜಾ ಇರುತ್ತದೆ ಅನ್ನುತ್ತಾರೆ. ಹಣಕಾಸಿನ ವ್ಯವಹಾರ ಮಾಡಿದ್ದರಿಂದ ಬ್ಯಾಂಕ ಬೋಜಾ ದಾಖಲಾಗಿರುತ್ತದೆ ಅಂದರೆ ನಿಜ. ಪ್ರತಿವಾದಿಯರಿಗೆ ಬ್ಯಾಂಕಿನವರು ಬೇಕಾದಷ್ಟು ಸಾಲ ಕೊಡುತ್ತಾರೆ ಆದ್ದರಿಂದ ನಮ್ಮ ಹತ್ತಿರ ಸಾಲ ಕೇಳುವ ಅವಶ್ಯಕತೆ ಇರಲಿಲ್ಲ ಅಂದರೆ ಸರಿಯಲ್ಲ. ದಾವೆ ಸಲ್ಲಿಸುವ ಸಮಯದಲ್ಲಿ ಪ್ರತಿವಾದಿಯರಿಗೆ ನೀಡಬೇಕಾಗದ ಬಾಕಿ ಹಣ ಹಾಗೂ ದಾಖಲೆ ನೋಂದಾಯಿಸಲು ನೀಡಬೇಕಾದ ಶುಲ್ಕದಷ್ಟು ಮೊತ್ತ ನನ್ನ ಹತ್ತಿರ ಹಣ ಇತ್ತು. ಅದಕ್ಕೆ ಸಂಬಂಧಿಸಿದಂತೆ ದಾಖಲೆ

ಇರುವುದಿಲ್ಲ. ನಾನು ಹೇಳುವ ಹಾಗೆ ಅಷ್ಟು ಮೊತ್ತದ ಹಣ ನನ್ನ ಹತ್ತಿರ ಇರಲಿಲ್ಲ ಆದ್ದರಿಂದ ಯಾವುದೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ.

ನಮ್ಮ ಊರಿನಲ್ಲಿ ಪ್ರಕಾಶ ದೊಡ್ಡಲಿಂಗಪ್ಪ ಹಾಗೂ ಮಲ್ಲಿಕಾರ್ಜುನ ಹಿರೆಮಠ ಉರ್ಫ ಚಿಕ್ಕಮಠ ಎಂಬ ಹೆಸರಿನ ವ್ಯಕ್ತಿಗಳು ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯರ ಮಧ್ಯ ನಿಪಿ-1 ರಂತೆ ಯಾವುದೆ ವ್ಯವಹಾರ ಆಗಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರು ನಿಪಿ-1 ನ್ನು ನನಗೆ ಎಂದಿಗೂ ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ಸದರಿ ದಾಖಲೆ ಸುಳ್ಳು ಹಾಗೂ ಖೊಟ್ಟಿ ದಾಖಲೆ ಅಂದರೆ ಸರಿಯಲ್ಲ. ಶಿವಲಿಂಗಪ್ಪ ಇವರು ಮೃತಪಟ್ಟ ನಂತರ 10-15 ದಿನಗಳಲ್ಲಿ ಮರಣ ಪ್ರಮಾಣ ಪತ್ರ ಮಾಡಿಸಿಕೊಡುತ್ತೇನೆ ಎಂದು ಅವರು ದುಃಖದಲ್ಲಿ ಇದ್ದಾಗ ನಿಪಿ-1 ಕ್ಕೆ ಅವರ ಸಹಿ ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಖಾಲಿ ಬಾಂಡ ಪೇಪರನ್ನು ದುರುಪಯೋಗ ಪಡಿಸಿಕೊಂಡು ನಿಪಿ-1 ನ್ನು ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. ನಿಪಿ-1 ರಲ್ಲಿ ಬರೆದ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ.

ದಾವೆಯನ್ನು ನನ್ನ ಸ್ನೇಹಿತರು ಹಾಗೂ ಅಕ್ಕಪಕ್ಕದವರು ಹೇಳಿದ ಮೇರೆಗೆ ತಯಾರಿಸಲಾಗಿದೆ. ಸಾಕ್ಷಿ ಪುನಃ ನನ್ನ ಇಚ್ಛಾಶಕ್ತಿ ಪ್ರಕಾರ ತಯಾರಿಸಲಾಗಿದೆ ಎನ್ನುತ್ತಾರೆ. ದಾವೆ ತಯಾರಿಸಲು ಮಾಹಿತಿ ನೀಡಿದ ಸ್ನೇಹಿತರ ಹೆಸರು ನೆನಪಿಲ್ಲ. ದಾವೆ ಸಲ್ಲಿಸಿದ ನಂತರ ನ್ಯಾಯಾಲಯದ ನಿರ್ಭಂದಕಾಜ್ಞೆ ನೀಡಿದ ಬಳಿಕ ಪ್ರತಿವಾದಿಯರಿಗೆ ನೀಡಿದ ನೋಟೀನ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನಮ್ಮ ವಕೀಲರು ನೀಡಿರುತ್ತಾರೆ ಎನ್ನುತ್ತಾರೆ. ದಾಖಲೆಗಳನ್ನು ಕಳೆಸಿರುವುದು ಗೊತ್ತಿದೆ ಆದರೆ ಅದರಲ್ಲಿ ಏನು ಬರೆದಿದೆ ಗೊತ್ತಿಲ್ಲ. ಪ್ರತಿವಾದಿಯರಿಗೆ ನೀಡಿದ ದಾಖಲೆಗಳಲ್ಲಿ ಇರುವ ಬಾಂಡಗೆ ಸಾಕ್ಷಿದಾರರ ಸಹಿಗಳು ಇರುವುದಿಲ್ಲ ಅಂದರೆ ಸಾಕ್ಷಿ ಆ ರೀತಿ ಮಾಡಲು ಬರುವುದಿಲ್ಲ ಅನ್ನುತ್ತಾರೆ. ಸದರಿ ದಾಖಲೆಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ವಾದ ಪತ್ರದ ಪ್ರತಿ, ಖರೀದಿ ಕಾರಾರು ಪತ್ರ, ನೋಟೀಸಿನ ಪ್ರತಿ ಹಾಗೂ ಅಂಚೆ ಸ್ವೀಕೃತಿ ಪತ್ರ ಹಾಗೂ ಕವರ್ ಗಳನ್ನು ಹಾಜರ ಪಡಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರ ಜೊತೆಗೆ ಹಾಜರ ಪಡಿಸಿದ ಬಾಂಡ ಪೇಪರನಲ್ಲಿ ಸಾಕ್ಷಿದಾರರ ಸಹಿಗಳು ಇರುವುದಿಲ್ಲ ಅಂದರೆ ಸಾಕ್ಷಿ ಅದನ್ನು ಹಣ ನೀಡಬಾರದು ಎಂದು ಸುಳ್ಳು ಸೃಷ್ಟಿಸಿದ್ದಾರೆ ಅನ್ನುತ್ತಾರೆ. ನಾನು ಖೊಟ್ಟಿ ಸೃಷ್ಟಿಸಿ ದಾಖಲೆಯನ್ನು ಪ್ರತಿವಾದಿಯರು ಸೃಷ್ಟಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ದಾಖಲೆ ಸೃಷ್ಟಿಸಿದ ಬಗ್ಗೆ ನನ್ನ ಹತ್ತಿರ ಮೂಲ ಕರಾರು ಪತ್ರ ಇರುತ್ತದೆ. ಮೂಲ ಕರಾರು ಪತ್ರ ಹೊರತು ಪಡಿಸಿ ಪ್ರತಿವಾದಿಯರು ದಾಖಲೆ ಸೃಷ್ಟಿಸಿದ ಬಗ್ಗೆ ಬೇರೆ ಯಾವುದೆ ದಾಖಲೆ ಇರುವುದಿಲ್ಲ. ಸತ್ಯ ಮರೆಮಾಚುವ ಸಲುವಾಗಿ ನಾನು ಪ್ರತಿವಾದಿಯರ ಮೇಲೆ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹಾಜರ ಪಡಿಸಿದದಾಖಲೆಗಳು ನಿಪಿ-1 ರಲ್ಲಿ ಹೇಳಿದಂತೆ ನಾನು ರೂ 18 ಲಕ್ಷ ಗಳಷ್ಟು ಹಣ ಕೊಡುವ ಸಾಮರ್ಥ್ಯ ಹೊಂದಿದ್ದೇನೆ ಎಂದು ಕಂಡುಬರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಹಾಗೂ

**ಓ ಎಸ್ ನಂ. 95/2024**
**ಪಿ ಡಬ್ಲ್ಯೂಃ 01**

ಪ್ರತಿವಾದಿಯರ ಮಧ್ಯ ಯಾವುದೆ ವ್ಯವಹಾರ ಆಗದಿದ್ದರೂ ಕೂಡಾ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವೆಯಲ್ಲಿ, ಸಾಕ್ಷಿ ಪ್ರಮಾಣ ಪತ್ರದಲ್ಲಿ, ನಿಪಿ-1 ಮತ್ತು 4 ರಲ್ಲಿ ಬರೆದ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**